6. ಟೆಂಡರ್‌ನಲ್ಲಿ ನಿಗದಿಯಾಗುವ ಸಾಗಾಣಿಕೆ ದರವು ಲೋಡಿಂಗ್ ಮತ್ತು ಅನ್ ಲೋಡಿಂಗ್ ವೆಚ್ಚ ಹಾಗೂ ಅನ್ವಯಿಸುವ ಎಲ್ಲಾ ತೆರಿಗೆಗಳು ಸೇರುತ್ತವೆ.
7. ಹಾಲಿನ ಪುಡಿಯನ್ನು ಶಾಲೆಗಳಿಗೆ ವಿತರಿಸಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ / ಇಲಾಖೆಯ ಅಧಿಕಾರಿಗಳಿಂದ ಸಹಿ ಹಾಗೂ ಮೊಹರು ಹೊಂದಿರುವ ಸ್ವೀಕೃತಿ ಪತ್ರವನ್ನು (ಸ್ವೀಕೃತಿ ಪತ್ರವು ಮೂರು ಪ್ರತಿ ಹೊಂದಿರುತ್ತದೆ) ಒಕ್ಕೂಟದಿಂದ ನೀಡುವ ನಿಗದಿತ ನಮೂನೆಯಲ್ಲಿ ಕಡ್ಡಾಯವಾಗಿ ಪಡೆದು ನಿಗದಿತ ಅವಧಿಯೊಳಗೆ ಒಕ್ಕೂಟಕ್ಕೆ ಸಲ್ಲಿಸುವುದು.
8. ಹಾಲಿನ ಪುಡಿ ತಾಲ್ಲೂಕು ಕೇಂದ್ರಗಳಿಗೆ ಸರಬರಾಜಾದ 7 ದಿವಸದೊಳಗೆ ಗುತ್ತಿಗೆದಾರರು ಸಾಗಾಣಿಕೆ ವೆಚ್ಚದ ಬಿಲ್ಲನ್ನು ಆಯಾ ತಾಲ್ಲೂಕು ನೋಡಲ್ ಅಧಿಕಾರಿಗಳಿಂದ ದೃಢೀಕರಿಸಿ ಪಾವತಿ ಕೋರಿ ಒಕ್ಕೂಟಕ್ಕೆ ಸಲ್ಲಿಸುವುದು. ಎಲ್ಲಾ ಶಾಲೆಗಳಿಂದ ಸ್ವೀಕೃತಿ ತಲುಪಿರುವ ಬಗ್ಗೆ ಪರಿಶೀಲಿಸಿ ನಂತರ ಬಿಲ್ ಪಾವತಿಗೆ ಮಂಡಿಸುವುದು.
9. ಸಾಗಾಣಿಕೆ ಬಿಲ್ಲನ್ನು ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ ಇವರ ಹೆಸರಿಗೆ ಪಾವತಿ ಕೋರಿ ಸಲ್ಲಿಸುವುದು.
10. ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡುವ ಸೇವೆಯಲ್ಲಿ ಯಾವುದೇ ನ್ಯೂನ್ಯತೆಗಳಿಂದ ಒಕ್ಕೂಟಕ್ಕೆ ನಷ್ಟ ಉಂಟಾದಲ್ಲಿ ಗುತ್ತಿಗೆದಾರರಿಗೆ ಸೂಕ್ತ ದಂಡವನ್ನು ವಿಧಿಸಿ ಅದರ ಮೊಬಲಗನ್ನು ಸಾಗಾಣಿಕೆ ಬಿಲ್ಲಿನಲ್ಲಿ ಕಠಾಯಿಸುವ ಹಕ್ಕನ್ನು ಹಾಗೂ ಗುತ್ತಿಗೆಯನ್ನು ಯಾವುದೇ ಮುನ್ಸೂಚನೆ ಇಲ್ಲದೆ ಹಿಂತೆಗೆಯುವ ಹಕ್ಕನ್ನು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.
11. ಶಾಲೆಗಳ ಬೇಡಿಕೆ ರೀತ್ಯ ಹಾಲಿನ ಪುಡಿಯನ್ನು ಪೂರೈಕೆ ಮಾಡಿ ಆಯಾ ಶಾಲೆಗಳಿಂದಲೇ ಸ್ವೀಕೃತಿ ಪತ್ರವನ್ನು ತರುವುದು.
12. ಕೆಲವೊಮ್ಮೆ ಕೆಲವು ಕ್ಲಸ್ಟರ್/ಶಾಲೆಗಳಿಗೆ ಹಾಲಿನ ಪುಡಿಯನ್ನು ಒಂದೇ ಮಾಹೆಯಲ್ಲಿ ಎರಡು ಬಾರಿ ಸರಬರಾಜು ಮಾಡಬೇಕಾಗ ಬಹುದಾಗಿದ್ದು ಅಂತಹ ಸಂದರ್ಭಗಳಲ್ಲಿ ಬಾಡಿಗೆಯನ್ನು ಪ್ರತಿ ಕೆ.ಜಿ ಆದಾರದಲ್ಲೇ ನಿಗದಿಪಡಿಸಲಾಗುವುದು.
13. ಪ್ರತಿ ಮಾಹೆಯಲ್ಲಿ ಹಾಲಿನ ಪುಡಿ ಪೂರೈಸಿದ ಶಾಲಾವಾರು ಪಟ್ಟಿ ಮತ್ತು ಡೆಲವರಿ ಚಲನ್‌ಗೆ ಆಯಾ ತಾಲ್ಲೂಕಿನ ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) / ಬಿ.ಇ.ಓ ರವರಿಂದ ಸಹಿ ಹಾಕಿಸಿ ಒಕ್ಕೂಟಕ್ಕೆ ಸಲ್ಲಿಸುವುದು.

**ಸಿ) "ಕ್ಷೀರ ಭಾಗ್ಯ" ಯೋಜನೆಯಡಿ ಶಿವಮೊಗ್ಗ ಕೇಂದ್ರ ಡೇರಿಯಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು ಸಾರಿಗೆ ವಾಹನ ಒದಗಿಸಲು ಷರತ್ತು ಮತ್ತು ನಿಬಂಧನೆಗಳು :**

1. ಯಶಸ್ವಿ ಟೆಂಡರ್‌ದಾರರು ಶಿವಮೊಗ್ಗ ಪ್ಯಾಕಿಂಗ್ ಕೇಂದ್ರಗಳಿಂದ ಕೆನೆರಹಿತ/ಕೆನೆಭರಿತ ಹಾಲಿನ ಪುಡಿಯನ್ನು ಎತ್ತುವಳಿ ಮಾಡಿ ಬೇಡಿಕೆ ರೀತ್ಯ ಶಿವಮೊಗ್ಗ ಜಿಲ್ಲೆಯ ಒಟ್ಟು 7 ತಾಲ್ಲೂಕುಗಳು ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ತಲಾ 6 ತಾಲ್ಲೂಕುಗಳು ಸೇರಿ ಎಲ್ಲ ಒಟ್ಟು 19 ತಾಲ್ಲೂಕುಗಳಲ್ಲಿನ ಗೋದಾಮುಗಳಿಗೆ / ಖಾಸಗಿ ಗುತ್ತಿಗೆ ಗೋದಾಮುಗಳಿಗೆ / ಎಲ್ಲಾ ತಾಲ್ಲೂಕು ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಛೇರಿ ಗೋದಾಮುಗಳಿಗೆ ಸಾಗಾಣಿಕೆ ಮಾಡುವುದು.
2. ಕೆನೆರಹಿತ ಹಾಲಿನ ಪುಡಿಯನ್ನು 500 ಗ್ರಾಂ ಪ್ಯಾಕ್‌ನ 25 ಕೆ.ಜಿ ಚೀಲಗಳಲ್ಲಿ ಹಾಗೂ ಕೆನೆಭರಿತ ಹಾಲಿನ ಪುಡಿಯನ್ನು 1 ಕೆ.ಜಿ ಪ್ಯಾಕ್‌ನ 25/20 ಕೆ.ಜಿ ಚೀಲಗಳಲ್ಲಿ ಎತ್ತುವಳಿ ಮಾಡಬೇಕಾಗಿರುತ್ತದೆ.

# ಅನುಬಂಧ –'ಬಿ'

## –: ದರಪಟ್ಟಿ :–

**ಗೆ,**

ವ್ಯವಸ್ಥಾಪಕ ನಿರ್ದೇಶಕರು,
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ
ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, (ನಿದಿಗೆ) ಅಂಚೆ– 577 222
ಶಿವಮೊಗ್ಗ ಜಿಲ್ಲೆ.

**ಮಾನ್ಯರೇ,**

**ಉಲ್ಲೇಖ:–** ನಿಮ್ಮ ಟೆಂಡರ್ ಪ್ರಕಟಣೆ ಐ.ಎಫ್.ಟಿ. ಸಂಖ್ಯೆ/ ಶಿಸಹಾಒ/ ಮಾರುಕಟ್ಟೆ /ಟೆಂಡರ್ /160 2015–16 **ದಿನಾಂಕ: 09.04.2015**

ಮೇಲಿನ ಉಲ್ಲೇಖಕ್ಕೆ ಸಂಬಂಧಿದಂತೆ, ಕೆಳಗೆ ಸಹಿ ಮಾಡಿರುವ ನಾನು/ನಾವು ನನ್ನ ದರ ಪಟ್ಟಿಯನ್ನು 06 ತಿಂಗಳ ಅವಧಿಗೆ ಬೆಂಗಳೂರು, ಚನ್ನರಾಯಪಟ್ನ, ಧಾರವಾಡ, ಪ್ಯಾಕಿಂಗ್ ಕೇಂದ್ರಗಳಿಂದ ಹಾಗೂ 1 ವರ್ಷದ ಅವಧಿಗೆ ಶಿವಮೊಗ್ಗ ಪ್ಯಾಕಿಂಗ್ ಕೇಂದ್ರದಿಂದ ಹಾಲಿನ ಪುಡಿಯನ್ನು ಸ್ವೀಕರಿಸಿ ನಿಗಧಿತ ಕಾಲದಲ್ಲಿ ತಾಲ್ಲೂಕು ಕೇಂದ್ರಗಳಿಗೆ ತಲುಪಿಸಲು ವಾಹನಗಳನ್ನು ಒದಗಿಸಲು ಟೆಂಡರ್‌ನ್ನು ಸಲ್ಲಿಸುತ್ತಿದ್ದೇನೆ.

## ವಿಭಾಗ–2 ವಾಣಿಜ್ಯ ದರ ಅನುಸೂಚಿ

| **ಗುತ್ತಿಗೆ**<br>ಕೆಲಸದ ವಿವರ | **ಗುತ್ತಿಗೆ ಕೆಲಸದ ವಿವರ** | **ಕೆಲಸ ನಿರ್ವಹಿಸಬೇಕಾದ ವಿವರ** | **ಹಾಲಿನಪುಡಿಯ ಸಾಗಾಣಿಕೆಯ ದರ (ಪ್ರತಿ ಟನ್‌ಗೆ)** |
|---|---|---|---|
| **ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿಯ ಮಾರ್ಗ** | ಬೆಂಗಳೂರು ಪ್ಯಾಕಿಂಗ್ ಕೇಂದ್ರದಿಂದ | 1) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಬೆಂಗಳೂರು ಪ್ಯಾಕಿಂಗ್ ಕೇಂದ್ರದಿಂದ | 2) ದಾವಣಗೆರ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಬೆಂಗಳೂರು ಪ್ಯಾಕಿಂಗ್ ಕೇಂದ್ರದಿಂದ | 3) ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಚನ್ನರಾಯಪಟ್ನ ಪ್ಯಾಕಿಂಗ್ ಕೇಂದ್ರದಿಂದ | 1) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಚನ್ನರಾಯಪಟ್ನ ಪ್ಯಾಕಿಂಗ್ ಕೇಂದ್ರದಿಂದ | 2) ದಾವಣಗೆರ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಚನ್ನರಾಯಪಟ್ನ ಪ್ಯಾಕಿಂಗ್ ಕೇಂದ್ರದಿಂದ | 3) ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಧಾರವಾಡ ಪ್ಯಾಕಿಂಗ್ ಕೇಂದ್ರದಿಂದ | 1) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಧಾರವಾಡ ಪ್ಯಾಕಿಂಗ್ ಕೇಂದ್ರದಿಂದ | 2) ದಾವಣಗೆರ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |
| | ಧಾರವಾಡ ಪ್ಯಾಕಿಂಗ್ ಕೇಂದ್ರದಿಂದ | 3) ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ. | ರೂ. ––––––– |

